# ದ್ವಿತೀಯ ಪಿ.ಯು.ಸಿ ಪೂರಕ ಪರೀಕ್ಷೆ, ಆಗಸ್ಟ್–2022
## ಐಚ್ಛಿಕ ಕನ್ನಡ–16 (ಮಾದರಿ ಉತ್ತರ ಸೂಚಿ)

**ಒಟ್ಟು ಅಂಕಗಳು–100**

### ಅ– ವಿಭಾಗ

**I ಒಂದು ವಾಕ್ಯದ ಉತ್ತರಗಳು.** **10x1=10**

1. ಆದಿದೇವ
2. ಅರ್ಜುನ
3. ಮಡಕೆ ಮಾಡುವುದು
4. ಕಾಳುಮತಿಗಳಿಗೆ ಬುದ್ಧಿ ಹೇಳಿ ಫಲವಿಲ್ಲ.
5. ಮಾಯೆಗೆ ಹೇಳಿದನು.
6. ಧೈರ್ಯ
7. ಕಳ್ಳತನ ಮಾಡುವುದು ನೀತಿಯಲ್ಲ.
8. ಕುಡುಕ
9. ಬರೆವಾತ ನಾಡ ನರಿ
10. ಕುಲಸತಿಯ ಬಳಿ ಕೋಪಿಸಿಕೊಳ್ಳಬಾರದು.
11. "ನಿಲ್ಲು ನಾಗಿ ನಿಲ್ಲು ನೋಡಬೇಕು ನಿನ್ನ" ಎಂದು ಹೇಳಿತು.
12. ಸೀರೆ ಮಾರುವವನು.
13. ಜಲಗಾರನನ್ನು ಸೇರಿಸರು.
14. ಮತದ ಮಂಕು ಬಡಿದಿದೆ.
15. ಶಿವನಿದ್ದಾನೆ.

### ಆ ವಿಭಾಗ

**II ಎರಡು ಮೂರು ವಾಕ್ಯಗಳ ಉತ್ತರ.** **4x2=8**

16. ಅರ್ಜುನನು ಶ್ರೇಷ್ಠ ಶಿವಾಗಮ ಶಾಸ್ತ್ರಗಳಲ್ಲಿ ತಿಳಿಸಿರುವ ರೀತಿಯಲ್ಲಿ ಮರಳಿನಿಂದ ಲಿಂಗವನ್ನು ಮಾಡಿ ಪರಮ ಭಕ್ತಿಯಿಂದ ಪಡ್ಡಳಿ, ಬಂದುಗೆ, ಕಕ್ಕೆ, ಮುತ್ತುಗ, ಪಾದರಿ ಮುಂತಾದ ಪುಷ್ಪಗಳು ಹಾಗೂ ಮೃದುವಾದ ಬಿಲ್ವಪತ್ರೆಯಿಂದ ಶಿವನನ್ನು ಭಕ್ತಿಯಿಂದ ಪೂಜಿಸಿದನು.
17. ಶಿವನು ಗುಂಡಯ್ಯನನ್ನು ಕುರಿತು ಮಡಕೆಯ ದನಿಯಿಂದ ತನ್ನನ್ನು ಗುಂಡಯ್ಯನಂತೆ ಆಡಿಸಿದವರು ಯಾರಿದ್ದಾರೆ ಮತ್ತು ಭೂಮಿಯಲ್ಲಿ ಗುಂಡಯ್ಯನಷ್ಟು ಉನ್ನತವಾದ ವ್ಯಕ್ತಿ ಬೇರೆ ಯಾರಿದ್ದಾರೆ ಎಂದು ಕೊಂಡಾಡಿದನು.
18. ಅಲ್ಲಮನು ಮಾಯೆಯ ಬಳಿ ಕನಸ್ಸಿನಲ್ಲಿ ಚೇಳು ಕಚ್ಚಿದಾಗ ಎಚ್ಚರಗೊಂಡ ಯಾರೂ ನೋವು ಎಂದು ನರಳುವುದಿಲ್ಲ. ಅದರಂತೆ ನಿನ್ನ ಮನೋವಿಕಾರಗಳು ನಿನ್ನನ್ನು ಬಾಧಿಸುವಾಗ ತನ್ನ ಮೇಲೆ ಕೋಪಿಸಿಕೊಂಡು ಪ್ರಯೋಜನವಿಲ್ಲ. ನಿನ್ನ ಜೊತೆ ಗೊಡವೆಗೆ ತಾನು ಸಿದ್ಧನಿಲ್ಲ ಎಂದು ಅಲ್ಲಮನು ಹೇಳುತ್ತಾನೆ.
19. ಮದ ಬಂದ ಆನೆ, ದುಷ್ಟನಾರಿ, ಹಾವು, ಹರಿವ ನೀರು, ಬೆಂಕಿ ಮತ್ತು  ದಡ್ಡ ವಿಶ್ವಾಸಕ್ಕೆ ಅರ್ಹರಲ್ಲ.
20. ಉದ್ದರಿಯ ಕೊಟ್ಟವನು ಹದ್ದಾದ, ಹಾವಾದ, ಎದ್ದೆದ್ದು ಬರುವ ನಾಯಾದ, ಹುತ್ತದ  ಗೊದ್ದದಂತೆ ಆದನು.

21. ಸಂಚಿಯ ಹೊನ್ನಮ್ಮನ ಪ್ರಕಾರ ಹುಟ್ಟಿದ ಮಗು ಗಂಡಾದ ಮಾತ್ರಕ್ಕೆ ಯಾವ ಪ್ರಯೋಜನ ಆಗುವುದಿಲ್ಲ. ಅದೇ ರೀತಿಯಲ್ಲಿ ಹೆಣ್ಣು ಹುಟ್ಟಿದರೆ ಯಾವುದೇ ಹಾನಿ ಆಗುವುದಿಲ್ಲ. ಬದಲಿಗೆ ಮಕ್ಕಳು ಗಂಡಾಗಲಿ ಹೆಣ್ಣಾಗಲಿ ಇವರಿಬ್ಬರಲ್ಲಿ ಯಾರು ತಮ್ಮ ಗುಣ ನಡತೆಯಿಂದ ಏಳಿಗೆಯನ್ನು ಸಾಧಿಸುತ್ತಾರೋ ಅವರಿಂದ ಇಹಪರ ಸುಖ ದೊರಕುವುದೆಂದು ಸಂಚಿ ಹೊನ್ನಮ್ಮ ಹೇಳಿದ್ದಾರೆ.

**III ಸಂದರ್ಭ–ಸ್ವಾರಸ್ಯ** **3x3=9**

22. ಪ್ರಸ್ತುತ ವಾಕ್ಯವನ್ನು ಆದಿಕವಿ ಪಂಪನು ರಚಿಸಿದ **'ಆದಿಪುರಾಣ'** ಎಂಬ ಕಾವ್ಯದಿಂದ ಆಯ್ದ **'ಪೊಸಯಿಸಿದಳಾಕೆ ನಾಟ್ಯಾಗಮಮಂ'** ಎಂಬ ಪದ್ಯದಿಂದ ಆರಿಸಿಕೊಳ್ಳಲಾಗಿದೆ.

ಆದಿನಾಥನ ಆಸ್ಥಾನದಲ್ಲಿ ನೀಲಾಂಜನೆಯ ನರ್ತಿಸುವಾಗ ಅವಳ ಆಯುಷ್ಯ ಕೊನೆಗೊಂಡು ಅದೃಶ್ಯಳಾಗುವ ಸಂದರ್ಭದಲ್ಲಿ ಕವಿ ಈ ಮಾತುಗಳನ್ನಾಡುತ್ತಾನೆ.

ಮಧುರವಾದ ಆಕಾರವನ್ನು, ಲತೆಯಂತೆ ಕೋಮಲವಾದ ದೇಹವನ್ನು ಹೊಂದಿದ್ದ ನೀಲಾಂಜನೆಯು ನಾಟ್ಯಮಾಡುತ್ತಿರುವಾಗ ಆಯುಷ್ಯವು ಅಂತ್ಯಗೊಂಡು ಮಿಂಚಿನಂತೆ ರಂಗಮಂಟಪದಿಂದ ಕಣ್ಮರೆಯಾಗುತ್ತಾಳೆ. ಈ ದೇಹ ಶಾಶ್ವತವಲ್ಲ. ಅಲ್ಲದೇ ಸಾವು ಯಾವ ಕ್ಷಣದಲ್ಲಿ ಬೇಕಾದರೂ ನಮಗೆ ಬಂದೊದಗಬಹುದು ಎನ್ನುವುದನ್ನು ನಾವು ಈ ಸರ್ಂದರ್ದಲ್ಲಿ ಗ್ರಹಿಸಬಹುದು.

23. ಈ ಸಾಲನ್ನು ಕವಿ ಷಡಕ್ಷರದೇವ ವಿರಚಿತ 'ಶಬರ ಶಂಕರ ವಿಳಾಸ' ಎಂಬ ಕೃತಿಯಿಂದ ಆಯ್ದ 'ಸೌಜನ್ಯ ವಿದೂರನಾದೆನ್' ಎಂಬ ಕಾವ್ಯಭಾಗದಿಂದ ಸ್ವೀಕರಿಸಲಾಗಿದೆ.

ಈ ಮೇಲಿನ ಮಾತನ್ನು ಅರ್ಜುನನು ಶಬರ ವೇಷದ ಶಂಕರನಿಗೆ ಹೇಳುತ್ತಾನೆ.

ತನ್ನೊಡನೆ ಹೋರಾಡಿದ ಶಂಕರನನ್ನು ಮೆಚ್ಚಿಕೊಳ್ಳುತ್ತಾ ಅರ್ಜುನನು ಶಬರ ವೇಷದ ಶಿವನ ಬಳಿ ಈ ಮಾತುಗಳನ್ನು ಆಡುತ್ತಾನೆ. ಶಬರನ ಪರಾಕ್ರಮವನ್ನು ಕಂಡು ಅರ್ಜುನನಿಗೆ ಅಚ್ಚರಿಯಾಗುತ್ತದೆ. ಅರ್ಜುನನೇ ಹೇಳುವಂತೆ ಆತನ ಪರಾಕ್ರಮವನ್ನು ಎದುರಿಸಿ ಹೋರಾಡುವ ಸಾಮರ್ಥ್ಯ ದೇವ ದನುಜರಲ್ಲಿ ಯಾರಿಗೂ ಇರಲಿಲ್ಲ. ಶಬರನು ಒಬ್ಬನೇ ಅರ್ಜುನನ ವಿರುದ್ಧ ಹೋರಾಡಿದ್ದು ಆತನ ಅಚ್ಚರಿಗೆ ಕಾರಣವಾಗುತ್ತದೆ.

24. ರಗಳೆಯ ಕವಿ ಹರಿಹರನ **'ಕುಂಬಾರ ಗುಂಡಯ್ಯನ ರಗಳೆ'** ಕೃತಿಯಿಂದ ಆಯ್ದ **'ಆಡಿದನಾಡಿದನಾಹಾ ಶಂಕರಾ..'** ಪದ್ಯಭಾಗದಿಂದ ಈ ಸಾಲನ್ನು ಆರಿಸಿಕೊಳ್ಳಲಾಗಿದೆ.

ಶಿವನು ಗಿರಿಜೆಯ ಬಳಿ ತಾನು ಗುಂಡನ ಹೃದಯದೊಳಗೆ ಆಡುತ್ತಿದ್ದೇನೆಂದು ನುಡಿಯುತ್ತಾನೆ. ಶಿವನ ಮಾತನ್ನು ಆಲಿಸಿದ ಗಿರಿಜೆಯು ಅಚ್ಚರಿಯಿಂದ ಈ ಮೇಲಿನಂತೆ ಪ್ರಶ್ನಿಸುತ್ತಾಳೆ.

ಭಕ್ತನೊಬ್ಬನು ಭಗವಂತನನ್ನು ಆಡಿಸುವ ಪರಿಯು ಗಿರಿಜೆಗೆ ಹೊಸತಾಗಿ ಕಾಣುತ್ತದೆ. ಆ ಭಕ್ತನ ಕುರಿತು ಆಕೆಗೆ ಕುತೂಹಲ ಮೂಡುತ್ತದೆ. ಆತನನ್ನು ಕಾಣುವ ಬಯಕೆಯನ್ನು ಗಿರಿಜೆ ಶಿವನ ಬಳಿ ವ್ಯಕ್ತಪಡಿಸುತ್ತಾಳೆ. ಇಲ್ಲಿ ಶಿವನ ಲೀಲೆ ಅಡಗಿದೆ. ಆತ ಗುಂಡಯ್ಯನ ಭಕ್ತಿಯನ್ನು ಗಿರಿಜೆಗೆ ಮಾತ್ರವಲ್ಲ ಇಡೀ ಜಗತ್ತಿಗೆ ತಿಳಿಸುವ ಬಯಕೆ ಹೊಂದಿದ್ದನು.

25. ಕವಿ ಚಾಮರಸನ 'ಪ್ರಭುಲಿಂಗಲೀಲೆ' ಕೃತಿಯಿಂದ ಆಯ್ದ 'ಕಾಳುಮತಿಗಳಿಗೆನಿತು ಬುದ್ಧಿಯ ಹೇಳಿದರೆ ಫಲವೇನು?' ಎಂಬ ಪದ್ಯಭಾಗದಿಂದ ಈ ಸಾಲನ್ನು ಆರಿಸಿಕೊಳ್ಳಲಾಗಿದೆ.

ಅಲ್ಲಮನು ವಿಮಳೆಯ ಬಳಿ ಈ ಮಾತುಗಳನ್ನು ಆಡುತ್ತಾನೆ.

ಅಲ್ಲಮನು ಮಾಯೆಯ ಮೋಹವನ್ನು ವಿಮಳೆಯ ಬಳಿ ನಿರಾಕರಿಸುತ್ತಾನೆ. ಆಗ ವಿಮಳೆಯು ಕಬ್ಬಿಣದಂತಹ ಮಾಯೆಯು ಪರುಷದಂತಹ ಅಲ್ಲಮನ ಸಹವಾಸ ಮಾಡಿದರೆ ಬಂಗಾರದಂತೆ ಆಗುತ್ತಾಳೆ. ಆದ್ದರಿಂದ ಅವಳನ್ನು ಸ್ವೀಕರಿಸುವಂತೆ ಒತ್ತಾಯಿಸುವ ಸಂದರ್ಭ ಇದಾಗಿದೆ.

ಅಲ್ಲಮನ ಪ್ರಕಾರ ಕಬ್ಬಿಣವು ಪರುಷ ಮುಟ್ಟಿದಾಗ ಹೊನ್ನಾಗುತ್ತದೆ. ಆದರೆ ಮಾಯೆ ಹಳೆಯ ಹಂಚಿನ ತರದವಳು. ಅವಳು ಬದಲಾಗುವುದಿಲ್ಲ ಎಂದು ಹೇಳಿ ಆಕೆಯ ಪ್ರೀತಿಯನ್ನು ನಿರಾಕರಿಸುತ್ತಾನೆ.

26. ಪ್ರಸ್ತುತ ವಾಕ್ಯವನ್ನು ಚಿಕ್ಕುಪಾಧ್ಯಾಯರ ರಂಗಧಾಮ ನೀತಿಶತಕ ಸಾಂಗತ್ಯದಿಂದ ಆಯ್ದ **'ಕೊಲ್ವುದು ಧರ್ಮವೇ ಕಳುವುದು ನೀತಿಯೇ?'** ಎಂಬ ಶತಕ ಸಾಹಿತ್ಯದಿಂದ ಆಯ್ದುಕೊಂಡಿದೆ.

ಕವಿಯು ಶತಕಗಳ ಮೂಲಕ ನೀತಿಯನ್ನು ಹೇಳುತ್ತಾ ಈ ಸಾಲುಗಳನ್ನು ರಚಿಸಿದ್ದಾರೆ.

ಕವಿಯು ಕನ್ನಡದ ಹಿರಿಮೆಯನ್ನು ಇಲ್ಲಿ ಹೇಳಿದ್ದಾರೆ. ಕನ್ನಡದ ಮೂಲಕವೇ ಸತ್ಯ ಕೇಳಬೇಕು. ಚಂದ ಎನಿಸುವ ಅಚ್ಚಕನ್ನಡ ದೇಸೀ ಕನ್ನಡಕ್ಕೆ ಸರಿಸಾಟಿ ಇಲ್ಲ ಎಂದಿದ್ದಾರೆ.

**IV ವಿವರವಾದ ಉತ್ತರ. 3x4=12**

27. ನಾಡೋಜ ಪಂಪನ 'ಆದಿಪುರಾಣ'ದ ಒಂಭತ್ತನೆಯ ಆಶ್ವಾಸದಲ್ಲಿ ಬರುವ ನೀಲಾಂಜನೆಯ ನೃತ್ಯವು ವಿಶೇಷವಾದ ಸನ್ನಿವೇಶವಾಗಿದೆ.

ಅಮರನರ್ತಕಿಯಾದ ನೀಲಾಂಜನೆಯ ವಸ್ತ್ರ, ಆಭರಣ, ಮತ್ತು ಮಾಲೆಗಳ ಆಡಂಬರದ ಬೆಡಗನ್ನು ವರ್ಣಿಸಲು ಕವಿಗೂ ಅಸಾಧ್ಯವಾಗಿತ್ತು. ಅವಳ ರೂಪವನ್ನು ಹೊಗಳಲು ಆ ಧರಣೇಂದ್ರನಿಗೂ ಅಸದಳವಾಗಿತ್ತು. ಮಧುರಗೀತ, ವಾದ್ಯ ಮತ್ತು ನೃತ್ಯಲೀಲೆಯು ಈ ನೀಲಾಂಜನೆಗಲ್ಲದೆ ಮತ್ತಾರಿಗೂ ಒಪ್ಪುತ್ತಿರಲಿಲ್ಲ. ಅಲ್ಲದೇ ಶ್ರೇಷ್ಠ ಗಣಿಕಾತಿಲಕಳಾಗಿದ್ದ ನೀಲಾಂಜನೆಯು ನೃತ್ಯ ವಿದ್ಯೆಯಿಂದ ನಿತ್ಯವೂ ಇಂದ್ರನ ಕೈಯಿಂದ ಉಡುಗೊರೆಯನ್ನು ಪಡೆಯುತ್ತಿದ್ದಳು. ಆದಿದೇವನ ಆಸ್ಥಾನದಲ್ಲಿ ಕಬ್ಬಿನ ಬಿಲ್ಲಿನಿಂದ ಹರಿತವಾದ ಮನ್ಮಥನ ಹೂ ಬಾಣವೇ ಬದುಕಿ ಬಂದಂತೆ ಆಕೆ ರಂಗ ಮಂಟಪವನ್ನು ಮತ್ತು ಪ್ರೇಕ್ಷಕರ ಅಂತರಂಗವನ್ನು ಪ್ರವೇಶಿಸುತ್ತಾಳೆ.

ಆಕೆಯ ರಸಭಾವಗಳ ಅಭಿನಯಗಳು ಹೊಸತಾಗಿದ್ದವು. ನಾಟ್ಯದ ನಾದವೂ ಹೊಸದಾಗಿತ್ತು. ಆಂಗಿಕ ಚಲನೆ, ನಯ, ಭಂಗಿ ಎಲ್ಲವೂ ಹೊಸದಾಗಿದ್ದವು. ಹೀಗೆ ನಾಟ್ಯಾಗಮವನ್ನೇ ಹೊಸತಾಗಿಸಿ ನೀಲಾಂಜನೆಯು ನರ್ತಿಸುತ್ತಾಳೆ. ಆ ಸಭೆಯಲ್ಲಿ ಪ್ರೇಕ್ಷಕರಾಗಿದ್ದ ರಾಜರುಗಳು ತಮ್ಮ ರೆಪ್ಪೆಗಳನ್ನು ಬಡಿಯದೇ ನೀಲಾಂಜನೆಯ ಸೌಂದರ್ಯವನ್ನು ಸವಿಯುತ್ತಾ ನಾಟ್ಯವನ್ನು ಆನಂದಿಸುತ್ತಿದ್ದರು. ಅವರು ಅತ್ಯಂತ ತನ್ಮಯತೆಯಿಂದ ನೀಲಾಂಜನೆಯ ನಾಭಿಮೂಲ ಮತ್ತು ಬಾಹುಮೂಲಗಳಲ್ಲಿ ಮನ್ಮಥನು ಬಚ್ಚಿಟ್ಟಿರುವ ಅಮೃತವನ್ನು ಸವಿಯುತ್ತಾ ಮೈಮರೆತು ಕುಳಿತಿದ್ದರು.

28. ಗುಂಡಯ್ಯನ ಮಡಕೆಯ ನಾದಕ್ಕೆ ಮೆಚ್ಚಿದ ಶಿವನು ಪಾರ್ವತೀ ಸಮೇತನಾಗಿ ಆತನ ಮನೆಗೇ ಬರುತ್ತಾನೆ. ಶಿವನನ್ನು ಕಣ್ಣೆದುರು ಕಂಡ ಗುಂಡಯ್ಯನು ಅತ್ಯುತ್ಸಾಹದಿಂದ ಮಡಕೆ ಕುಡಿಕೆಗಳನ್ನು ಬಾರಿಸುತ್ತಾ ಕುಣಿಯಲಾರಂಭಿಸುತ್ತಾನೆ. ಹರಿಹರನೇ ಹೇಳುವಂತೆ,

> "ಆಡುವ ಗುಂಡಯ್ಯನ ಹೊಸ ನೃತ್ಯಂ
> ನೋಡುವ ಶಿವನಂ ಮುಟ್ಟಿತು ಸತ್ಯಂ"

ಹೀಗೆ ಗುಂಡಯ್ಯನ ನೃತ್ಯವನ್ನು ಕಂಡ ಶಿವನು ಇಲ್ಲಿಯ ತನಕ ಗುಂಡಯ್ಯನ ಹೃದಯದಲ್ಲಿ ಆಡುತ್ತಿದ್ದವನು ಜಗವರಿಯುವಂತೆ ಹೊರಗೆ ಆಡಲು ಮುಂದಾಗುತ್ತಾನೆ.

ಪರಶಿವನು ತನ್ನ ದಶಭುಜಗಳನ್ನು ದಶದಿಕ್ಕುಗಳಿಗೆ ಪಸರಿಸಿ, ಕಂಗೊಳಿಸುವ ಕರಗಳನ್ನು ಸುತ್ತಲೂ ಚಿಮ್ಮುತ್ತಾನೆ. ಆತನ ಒಂದು ಪದವು ಪಾತಾಳವನ್ನು ಒತ್ತಲು ಮತ್ತೊಂದು ಪದವು ಬ್ರಹ್ಮಾಂಡವನ್ನು ಎತ್ತಿತು. ಆತನ ಜೆಡೆಗಳು ಬೆನ್ನಿನ ಮೇಲೆ ಆಡಲಾರಂಭಿಸಿದವು. ಮುಡಿಯಲ್ಲಿನ ಸುರನದಿಯು ತುಳುಕಾಡಲಾರಂಭಿಸಿತು. ತಡಿಯಲ್ಲಿನ ಶಶಿಕಳೆಯು ಅಲ್ಲಾಡತೊಡಗಿತು. ಚೆಲುವಾದ ಚಂದಿರನು ಕುಣಿದಾಡಲಾರಂಭಿಸಿದನು. ಹೊಳೆಯುವ ಡಮರುಗವು ಢಂಢಂಢಣ ಎಂದು ಮೊಳಗಿತು. ತ್ರಿಶೂಲದ ಹರಿಯ ಅವತಾರವು ತಿರ್ರನೆ ತಿರುಗಿತು. ಕೊರಳಿನ ಸರ್ಪಗಳು ಹೆಡೆಯೆತ್ತಿದವು. ತೊಟ್ಟಿದ್ದ ಗಜಚರ್ಮವು ಆಗಸವನ್ನು ಆವರಿಸಿತು. ಕೈಯಲ್ಲಿದ್ದ ಬ್ರಹ್ಮಕಪಾಲವು ಬೊಬ್ಬೆಯಿಟ್ಟಿತು. ಸುರರ ಶಿರೋಮಾಲೆಗಳು ಉಲಿಯತೊಡಗಿದವು. ಹೊಂಗೆಜ್ಜೆಗಳು ಘಲಘಲ ಎಂದರೆ, ಘಂಟೆಗಳು ಥಣಂ ಥಂ ಥಣ ಎಂದು ಸದ್ದು ಮಾಡಿದವು. ಹೀಗೆ ಶಿವನು ನರ್ತಿಸಲಾರಂಭಿಸಿದನು.

ಶಿವನ ಕುಣಿತವನ್ನು ಕಂಡು ಸುರಲೋಕದಿಂದ ಬಂದ ವಾದ್ಯವೃಂದವು ತಮ್ಮ ವಾದ್ಯಗಳನ್ನು ನುಡಿಸಲು ಮುಂದಾದಾಗ ಶಿವನು ಅವರನ್ನು ತಡೆದು ಮಡಕೆಯ ವಾದ್ಯವೇ ಸಾಕೆಂದು ಹೇಳಿದನು. ಶಿವನನ್ನು ಕಂಡು ಆತನ ಭಕ್ತನಾದ ಗುಂಡಯ್ಯನು ಕುಣಿಯಲಾರಂಭಿಸಿದನು. ಅವರಿಬ್ಬರನ್ನೂ ಕಂಡ ಶಿವಗಣವೂ ಅವರ ಜೊತೆ ಕುಣಿಯಲಾರಂಭಿಸಿತು. ಶಿವನ ಮುಖದಿಂದ ನಾನಾ ತೆರನಾದ ಆನಂದ ಹೊರಹೊಮ್ಮಿತು. ಗಿರಿಜೆಯ ಕೋರಿಕೆಗೆ ಮಣಿದು ಶಿವನು ಕುಣಿತವನ್ನು ನಿಲ್ಲಿಸಿದನು.

29. ಮಾಯಾದೇವಿಗೆ ಅಲ್ಲಮನ ಮೇಲೆ ಮೋಹ ಉಂಟಾಗುತ್ತದೆ. ಈ ಸಂಗತಿಯನ್ನು ಅಲ್ಲಮನಿಗೆ ಹೇಳಲು ಮಾಯೆಯು ತನ್ನ ಗೆಳತಿ ವಿಮಳೆಯನ್ನು ಕಳುಹಿಸುತ್ತಾಳೆ. ಅವರಿಬ್ಬರ ನಡುವೆ ನಡೆಯುವ ಸಂಭಾಷಣೆ ಸ್ವಾರಸ್ಯಕರವಾಗಿದೆ.

ವಿಮಳೆಯು ಅಲ್ಲಮನು ಮಾಯೆಗೆ ಒಲಿಯಬೇಕೆಂದು ಪ್ರಾರ್ಥಿಸುತ್ತಾಳೆ. ತನು-ಮನಗಳಲ್ಲಿ ಅಲ್ಲಮನನ್ನೇ ತುಂಬಿಕೊಂಡಿರುವ ಮಾಯೆಯನ್ನು ಕರುಣೆಯಿಂದ ರಕ್ಷಿಸಿ ಸಲಹಬೇಕೆಂದು ವಿಮಳೆ ಬೇಡಿಕೊಂಡಾಗ ಅಲ್ಲಮನು ನಿರಾಕರಿಸುತ್ತಾ, ನೀರಿಗೆ ಹೆಪ್ಪನ್ನು ಎರೆದರೆ ಅದನ್ನು ತಿಂದು ಬದುಕಿದವರಿಲ್ಲ. ಅದರಂತೆ ಕಾಳುಮತಿಗಳಿಗೆ ಬುದ್ಧಿ ಹೇಳಿ ಪ್ರಯೋಜನವಿಲ್ಲ ಎಂದು ನುಡಿಯುತ್ತಾನೆ.

ವಿಮಳೆ ಪಟ್ಟುಬಿಡದೆ ಕೀಳುಕಬ್ಬಿಣದಂತಹ ಹೆಣ್ಣನ್ನು ಪರುಷದಂತಹ ಗಂಡಸು ಕಾಲಲ್ಲಿ ಒದ್ದರೂ ತೋಳಲ್ಲಿ ಅಪ್ಪಿಕೊಂಡರೂ ಒಂದೇ. ಆದ್ದರಿಂದ ಕಬ್ಬಿಣದಂತಹ ಮಾಯೆಯನ್ನು ಸ್ವೀಕರಿಸಿದರೆ ಅವಳು ಹೊನ್ನಿನಂತೆ ಆಗುತ್ತಾಳೆ ಎಂದು ಹೇಳುತ್ತಾಳೆ. ಆದರೆ ಅದಕ್ಕೆ ಪ್ರತಿಯಾಗಿ ಅಲ್ಲಮನು ಕೀಳು ಕಬ್ಬಿಣವನ್ನು ಪರುಷ ಮುಟ್ಟಿದಾಗ ಹೊನ್ನಾಗುತ್ತದೆ. ಆದರೆ ಹಳೆಯ ಹಂಚನ್ನು ಪರುಷ ಮುಟ್ಟಿದರೆ ಹೊನ್ನಾಗುವುದಿಲ್ಲ. ಮಾಯೆಯ ಮನಸ್ಸು ಚಂಚಲವಾದುದು. ಅವಳು ಬದಲಾಗುವುದಿಲ್ಲ ಎಂದು ಹೇಳುತ್ತಾನೆ.

ಆದರೆ ವಿಮಳೆ ಸುಮ್ಮನಿರದೆ ನೀನು ಕೃಪೆ ತೋರಿದರೆ ಮಾಯೆಗೆ ಒಳಿತಾಗುತ್ತದೆ. ಅಲ್ಲದೇ ಅವಳ ಪ್ರತಿಜ್ಞೆ ನೆರವೇರಿಸಿದರೆ ನಿನ್ನ ದೇವತನಕ್ಕೆ ಯಾವುದೇ ಊನವಾಗುವುದಿಲ್ಲ ಎಂದು ನುಡಿದಾಗ ಅಲ್ಲಮನು ಒಂದು ಬೀಜವನ್ನು ಬಿತ್ತಿ ಮತ್ತೊಂದು ಫಲವನ್ನು ಬಯಸಿ ಪ್ರಯೋಜನವಿಲ್ಲ ಎನ್ನುತ್ತಾನೆ.

30. ಸರ್ವಜ್ಞನ ತ್ರಿಪದಿಗಳು ಸಾರ್ವಕಾಲಿಕ ಮೌಲ್ಯಗುಣದಿಂದಾಗಿ ಜನರ ಮನಸ್ಸು ಗೆದ್ದಿದೆ. ಪ್ರಸ್ತುತ 'ಹಸನಾಗಿ ದುಡಿದರೆ ಆಶನ-ವಸನಗಳು' ಎಂಬ ಪದ್ಯಭಾಗದಲ್ಲಿದಲ್ಲಿ ಇಂತಹ ಅಂಶಗಳೇ ಪ್ರಧಾನವಾಗಿದೆ. ಚೆನ್ನಾಗಿ ದುಡಿದು ಅನ್ನ ಬಟ್ಟೆಗಳನ್ನು ಸಂಪಾದಿಸಬೇಕೆಂಬ ಶ್ರಮ ಸಂಸ್ಕೃತಿಯ ಪಾಠ ಹೇಳಿರುವುದೇ ಇದಕ್ಕೆ ಉದಾಹರಣೆ ಎನ್ನಬಹುದು, ಅಲ್ಲದೇ ಲೋಭದಿಂದ ವರ್ತಿಸಬಾರದು, ಸೇಂದಿ, ಭಂಗಿ ಮುಂತಾದ ವ್ಯಸನಗಳಿಗೆ ಬಲಿಯಾಗಬಾರದು, ದೇವರು ಸರ್ವಾಂತರ್ಯಾಮಿ, ರೈತನನ್ನು ಗೌರವಿಸಬೇಕು, ಕಚ್ಚೆ, ನಾಲಿಗೆ, ಕೈಗಳು ಶುಭ್ರವಾಗಿರಬೇಕು. ಯೋಗ್ಯರಿಗೆ ಮಾತ್ರ ದಾನ ನೀಡಬೇಕು, ಹೆಂಡತಿಯೊಂದಿಗೆ ಮನಮುಟ್ಟಿ ಬದುಕಬೇಕು. ತಾಯಿಯೇ ಜಗದಲ್ಲಿ ದೊಡ್ಡವಳು. ಇವೇ ಮುಂದಾದ

ವಿಚಾರಗಳು ಸರ್ವಕಾಲಕ್ಕೂ ಸಲ್ಲುವ ಜೀವನ ಮೌಲ್ಯಗಳೆನ್ನಬಹುದು. ಇವುಗಳನ್ನು ಅತ್ಯಂತ ಸರಳವಾದ ಭಾಷೆಯಲ್ಲಿ ಮನಮುಟ್ಟುವಂತೆ ಕವಿ ಹೇಳಿದ್ದಾರೆ.

31. ಮಗಳಾದವಳು ತನ್ನ ಗಂಡನ ಮನೆಯಲ್ಲಿ ಬಾಳ್ವೆ ಮಾಡುವಾಗ ಗಂಡನ ಮನೆಯವರು ತವರು ಮನೆಯವರನ್ನು ಬೈದರೆಂದು ಅವರ ಮೇಲೆ ಹಗೆ ಸಾಧಿಸದೆ ತಾಳ್ಮೆಯಿಂದ ಇರಬೇಕು, ಗಂಡನ ಮನೆಯಲ್ಲಿರುವ ಸಿರಿತನದ ಅಹಂಕಾರದಿಂದ ತನ್ನತನವನ್ನು ಮರೆತು ನಡೆಯಬಾರದು, ತನ್ನ ಜೊತೆ ಸೇರಿ ಕೆಲಸ ಮಾಡುವ ಸೇವಕರನ್ನು ತಾಳ್ಮೆಯಿಂದ ನೋಡಿಕೊಳ್ಳಬೇಕು ಎಂದು ಸತಿ ಧರ್ಮದಲ್ಲಿ ಹೇಳಿದ್ದಾರೆ.

ಏನೊಂದು ಅರಿಯದ ಎಳೆಯ ವಯಸ್ಸಿನ ಮಡದಿಯು ಅಭಿಮಾನದಿಂದ ಸ್ವಲ್ಪ ಅಹಂಕಾರವನ್ನು ತೋರಿದಾಗ ಪತಿಯಾದವನು ಅವಳ ಬಗ್ಗೆ ಮಾತ್ಸರ್ಯ ತೋರದೆ ಬಿಗುಮಾನ ತೋರದೆ ಅವಳನ್ನು ಮನ್ನಿಸಿ ಗೌರವದಿಂದ ಬದುಕು ನಡೆಸುವಂತೆ ಹೊನ್ನಮ್ಮ ಹೇಳಿದ್ದಾಳೆ.

ಹೆಂಡತಿಗೆ ವಯಸ್ಸಾದಾಗ ಆಕೆಯಲ್ಲಿ ಯಾವುದೇ ಕೊರತೆಯನ್ನು, ಲೋಪವನ್ನು ಕಾಣದೇ ಮೊದಲಿನಂತೆ ಪ್ರೀತಿಯಿಂದ ನೋಡಿಕೊಳ್ಳಬೇಕೆಂದಿದ್ದಾರೆ.

## V ಭಾವಾರ್ಥ 1x4=4

32. ಈ ಪದ್ಯಭಾಗವನ್ನು ಕವಿ ಷಡಕ್ಷರದೇವ ವಿರಚಿತ **'ಶಬರ ಶಂಕರ ವಿಳಾಸ'** ಎಂಬ ಕೃತಿಯಿಂದ ಆಯ್ದ **'ಸೌಜನ್ಯ ವಿದೂರನಾದೆನ್'** ಎಂಬ ಕಾವ್ಯಭಾಗದಿಂದ ಸ್ವೀಕರಿಸಲಾಗಿದೆ.

ಬೇಡವೇಷಧಾರಿಯಾದ ಶಿವ ಮತ್ತು ಅರ್ಜುನನ ನಡುವಿನ ಕಾಳಗದ ಸಂದರ್ಭ ಇದಾಗಿದೆ. ಶಿವ ಮತ್ತು ಅರ್ಜುನನ ನಡುವಿನ ಕಾಳಗದಲ್ಲಿ ನಿರಾಯುಧನಾದ ಅಜುನನು ಶಿವನ ಮೇಲೆ ಸಿಡಿಲಿನಂತೆ ಎರಗಿದಾಗ ಕೋಪಗೊಂಡ ಶಿವನು ಅರ್ಜುನನನ್ನು ಕೆಳಕ್ಕೆ ಬೀಳಿಸಿ ಎದೆಯ ಮೇಲೆ ಕಾಲಿಟ್ಟು ತುಳಿಯುತ್ತಾನೆ. ಆಗ ಅರ್ಜುನನ ಬಾಯಿ ಮತ್ತು ಮೂಗಿನ ಎರಡೂ ಹೊಳ್ಳೆಗಳಿಂದಲೂ ನೆತ್ತರು ಹೊರಹೊಮ್ಮುತ್ತದೆ.

ಕಿರಾತಾರ್ಜುನ ಪ್ರಸಂಗವು ಅರ್ಜುನನಿಗೆ ತನ್ನ ಪರಾಕ್ರಮದ ಬಗ್ಗೆ ಇದ್ದ ಅಹಂಕಾರವನ್ನು ಸಾಕ್ಷಾತ್ ಶಿವನೇ ಕಿರಾತನ ವೇಷದಲ್ಲಿ ಬಂದು ದಮನ ಮಾಡಿದ ಕಥೆಯನ್ನು ನಿರೂಪಿಸುತ್ತದೆ. ಶಿವನಲ್ಲಿ ಅರ್ಜುನನಿಗೆ ಅಪಾರವಾದ ಭಕ್ತಿಯಿತ್ತು. ಆದರೆ ಅದೇ ರೀತಿ ತನ್ನ ಪರಾಕ್ರಮದ ಬಗೆಗೂ ಅಪರಿಮಿತವಾದ ಅಹಂಕಾರವಿತ್ತು. ತನ್ನನ್ನು ಎದುರಿಸುವವರು ದೇವಾಸುರರಲ್ಲಿ ಯಾರಿಲ್ಲವೆಂಬ ಗರ್ವ ಆತನದ್ದಾಗಿತ್ತು. ಈ ಅಹಂಕಾರವನ್ನು ದೂರಮಾಡಿ ಅರ್ಜುನನಿಗೆ ಅನುಗ್ರಹಿಸುವ ಸಲುವಾಗಿ ಲೀಲಾಪ್ರಿಯನಾದ ಶಿವನು ಈ ಸನ್ನಿವೇಶವನ್ನು ಸೃಷ್ಟಿಸುತ್ತಾನೆ.

33. ಪ್ರಸ್ತುತ ಪದ್ಯವನ್ನು ಚಿಕ್ಕುಪಾಧ್ಯಾಯರ ರಂಗಧಾಮ ನೀತಿಶತಕ ಸಾಂಗತ್ಯದಿಂದ ಆಯ್ದ **'ಕೊಲ್ವುದು ಧರ್ಮವೇ ಕಳುವುದು ನೀತಿಯೇ?'** ಎಂಬ ಶತಕ ಸಾಹಿತ್ಯದಿಂದ ಆಯ್ದುಕೊಂಡಿದೆ.

ಕವಿಯು ಶತಕಗಳ ಮೂಲಕ ನೀತಿಯನ್ನು ಹೇಳುತ್ತಾ ಈ ಸಾಲುಗಳನ್ನು ರಚಿಸಿದ್ದಾರೆ. ಗುರುವಿಗೆ, ದೈವಕ್ಕೆ, ಧರ್ಮಕ್ಕೆ ದಾನಕ್ಕೆ ಬಳಸದ ಸಂಪತ್ತು ವ್ಯರ್ಥ ಎಂದು ತನ್ನ ಶತಕದಲ್ಲಿ ಬದುಕಿನ ಮೌಲ್ಯಗಳ ಬಗ್ಗೆ ವಿವರಿಸಿದ್ದಾರೆ ಕವಿ.

ದಾನ ಮಾಡುವಾಗ ಯೋಗ್ಯರಿಗೆ ಮಾತ್ರ ಧನ ಮಾಡಬೇಕು. ಅಪಾತ್ರಗೆ ದಾನ ಮಾಡಿದಾಗ ಸಂಪತ್ತು ವ್ಯರ್ಥವಾಗುತ್ತದೆ.

### ಇ ವಿಭಾಗ

**VI ಎರಡು ಮೂರು ವಾಕ್ಯಗಳ ಉತ್ತರ. 2x2=4**

34. ಊರಿನಲ್ಲಿ ಹಗಲಿರುಳು ನಿದ್ದೆ ಮಾಡುತ್ತಿದ್ದ ಬೆಟ್ಟಗಳಿದ್ದವು. ಊರ ಸುತ್ತಲು ತೆನೆಗಳಿಂದ ತೊನೆಯುತ್ತಿದ್ದ ಹಸಿರು ಗದ್ದೆಗಳಿದ್ದವು. ಸಾಲು ಮರದ ನೆರಳಿನಲ್ಲಿ ಹಾವಿನಂತಹ ಹಾದಿಯಿತ್ತು. ಊರು ತೆಂಗು, ಅಡಿಕೆ ಮರಗಳನ್ನು ತನ್ನ ಮಡಿಲಲ್ಲಿಟ್ಟುಕೊಂಡು ನಿಂತಿತ್ತು ಎಂದು ಕವಿ ಊರನ್ನು ವರ್ಣಿಸುತ್ತಾರೆ.
35. ಬೆಕ್ಕಿನೊಂದು ಸ್ವರವನ್ನು ನಾಗಿ ಮತ್ತು ಅವಳ ತಾಯಿ ಆಲಿಸಿದರು.
36. ಸೀರೆಯವರು ಹಸಿರು ಸೀರೆ, ನೀಲಿ ಸೀರೆ, ಜರಿಯ ಸೆರಗಿನ ಸೀರೆ, ಹಸೆಯ ಮೆರುಗಿನ ಸೀರೆಯನ್ನು ತಂದಿದ್ದನು.

**VII ಸಂದರ್ಭ –ಸ್ವಾರಸ್ಯ 1x3=3**

ಪ್ರಸ್ತುತ ವಾಕ್ಯವನ್ನು ಸು.ರಂ.ಎಕ್ಕುಂಡಿಯವರು ಬರೆದ 'ಕಥನ ಕವನಗಳು' ಸಂಕಲನದಿಂದ ಆಯ್ದ 'ನಾಗಿಯ ಕಥೆ' ಎಂಬ ಕಥನ ಕಾವ್ಯದಿಂದ ಆರಿಸಲಾಗಿದೆ.

ಕಥಾನಾಯಕಿಯಾದ ನಾಗಿಯ ಊರಲ್ಲಿ ತೇರನೆಳೆಯುವ ದೊಡ್ಡ ಸಂಭ್ರಮ ಬಂದಾಗ ನಾಗಿಯು ಅಂದು ಮುಂಜಾನೆ ಎದ್ದು ಮಿಂದು ಹಸಿರು ಸೀರೆಯನ್ನುಟ್ಟು ಇಂದ್ರಧನುವಿನಂತೆ ಹೊಳೆಯುವ ರವಿಕೆತೊಟ್ಟು ಮಡಿಕೆ ತುಂಬ ಹಾಲು ಕರೆದು ತಾಯ ಕೈಗೆ ಕೊಟ್ಟು ಈ ಮೇಲಿನಂತೆ ನುಡಿಯುತ್ತಾಳೆ

ನಾಗಿಯಲ್ಲಿ ಜಾತ್ರೆಯ ಸಂಭ್ರಮವನ್ನು ಕಾಣಬಹುದು. ಸಾಮಾನ್ಯವಾಗಿ ಯುವಕ ಯುವತಿಯರಿಗೆ ಮತ್ತು ಮಕ್ಕಳಿಗೆ ಜಾತ್ರೆಯನ್ನು ಕಾಣುವ ಹಂಬಲ ಹೆಚ್ಚಿರುತ್ತದೆ.

37. ಪ್ರಸ್ತುತ ವಾಕ್ಯವನ್ನು ಸು.ರಂ.ಎಕ್ಕುಂಡಿಯವರು ಬರೆದ 'ಕಥನ ಕವನಗಳು' ಸಂಕಲನದಿಂದ ಆಯ್ದ 'ನಾಗಿಯ ಕಥೆ' ಎಂಬ ಕಥನ ಕಾವ್ಯದಿಂದ ಆರಿಸಲಾಗಿದೆ.

ನಾಗಿ ಜಾತ್ರೆಗೆ ಹೋದಾಗ ಕಣ್ಣು ಸೆಳೆಯುವ ಸೀರೆಯನ್ನು ನೋಡುತ್ತಾಳೆ. ಅಲ್ಲಿ ಎಳೆ ನಗೆಯ ರೂಪವಂತನಾದ ಸೀರೆ ಮಾರುವವನನ್ನು ಕಂಡು ನಾಗಿಗೆ ಅವನ ಮೇಲೆ ಪ್ರೀತಿ ಉಂಟಾದ ಸಂದರ್ಭದಲ್ಲಿ ಕವಿ ಈ ಮೇಲಿನಂತೆ ನುಡಿದಿದ್ದಾರೆ.

ಮೊದಲ ನೋಟದಲ್ಲಿಯೇ ಪ್ರೀತಿ ಹುಟ್ಟಿಕೊಳ್ಳುತ್ತದೆ ಎನ್ನುವುದಕ್ಕೆ ಸಾಕ್ಷಿ ನಮಗೆ ಇಲ್ಲಿ ದೊರಕುತ್ತದೆ. ಕಣ್ಣಿನ ಮೂಲಕವೇ ನಾಗಿ ಮತ್ತು ಸೀರೆಯವನು ಪರಸ್ಪರ ಪ್ರೀತಿ ವ್ಯಕ್ತಪಡಿಸುವುದನ್ನು ನಾವು ಇಲ್ಲಿ ಕಾಣುತ್ತೇವೆ.

38. ಪ್ರಸ್ತುತ ವಾಕ್ಯವನ್ನು ಸು.ರಂ.ಎಕ್ಕುಂಡಿಯವರು ಬರೆದ 'ಕಥನ ಕವನಗಳು' ಸಂಕಲನದಿಂದ ಆಯ್ದ 'ನಾಗಿಯ ಕಥೆ' ಎಂಬ ಕಥನ ಕಾವ್ಯದಿಂದ ಆರಿಸಲಾಗಿದೆ.

ನಾಗಿ ತೇರನೆಳೆಯುವ ಸಂಭ್ರಮಕ್ಕೆ ಹೋದಾಗ ಅಲ್ಲಿ ಬಣ್ಣ ಬಣ್ಣದ ಸೀರೆಯೊಡನೆ ರೂಪವಂತನಾದ ಸೀರೆಯವನನ್ನು ನೋಡುತ್ತಾಳೆ. ಅವನ ನೋಟದಲ್ಲೇ ನಾಗಿಯಲ್ಲಿ ಪ್ರೀತಿ ಹುಟ್ಟಿಕೊಳ್ಳುತ್ತದೆ. ಅಂದಿನಿಂದ ನಾಗಿಯಲ್ಲಾದ ಬದಲಾವಣೆಯನ್ನು ಕವಿ ಇಲ್ಲಿ ಸೂಚಿಸುತ್ತಾರೆ.

ನಾಗಿಯ ಎದೆಯಲ್ಲಿ ಹುಟ್ಟಿಕೊಂಡ ಪ್ರೀತಿಯನ್ನು ಕವಿ ಸು. ರಂ ಎಕ್ಕುಂಡಿಯವರು ಎದೆಯಲ್ಲಿ ಹೊತ್ತಿಸಿಟ್ಟ ಬಂಗಾರದ ದೀಪಕ್ಕೆ ಹೋಲಿಸಿದ್ದಾರೆ.

**VIII ವಿವರವಾದ ಉತ್ತರ. 1x4=4**

39. ಕಥಾನಾಯಕಿಯಾದ ನಾಗಿಯು ಇದ್ದಂತಹ ಊರಿನಲ್ಲಿ ತೇರನೆಳೆಯುವ ದೊಡ್ಡ ಸಂಭ್ರಮ. ಆ ದಿನ ನಾಗಿಯು ಬೇಗನೆ ಎದ್ದು ಸ್ನಾನ ಮಾಡಿ ಹಸಿರು ಸೀರೆ ಉಟ್ಟು ಇಂದ್ರಧನುವಿನಂತೆ ಹೊಳೆಯುವ ರವಿಕೆ ತೊಟ್ಟುಕೊಂಡಳು. ನಾಗಿಯು ಮಡಕೆ ತುಂಬ ಹಾಲು ಕರೆದು ತಾಯ ಕೈಗೆ ಕೊಟ್ಟು ತೇರನ್ನು ನೋಡಿ ಬರುವ ಬಾರೆ ಎಂದು ತಾಯಿಯನ್ನು ಕರೆದಳು.

ತಾಯಿ ಮಗಳು ತೇರನ್ನು ನೋಡಲೆಂದು ಮನೆಯಿಂದ ಹೊರಟರು, ಆ ಸಂದರ್ಭದಲ್ಲಿ ಕೊಕ್ಕರೆಗಳು ಚುಂಚಿನಲ್ಲಿ ಚುಂಚನಿರಿಸಿ ನೀರಿಗಿಳಿದು ಆಡುತ್ತಿದ್ದವು, ಜಾತ್ರೆಗೆ ಹೋಗುವ ಸಂದರ್ಭದಲ್ಲಿ ತಾಯಿ ಮಗಳು ಅಲ್ಲೇ ಬೆಕ್ಕನ್ನು ಕಂಡು ಎತ್ತಿಕೊಂಡು ಜಾತ್ರೆಗೆ ಬಂದಳು.

40. ನಾಗಿಯ ಪಾತ್ರದ ಮೂಲಕ ಕವಿಯು ಯೌವ್ವನದ ಮನಸ್ಥಿತಿಯನ್ನು ಚಿತ್ರಿಸಿದ್ದಾರೆ. ಯೌವನವು ವ್ಯಕ್ತಿಯ ಬದುಕಿನಲ್ಲಿ ಸುಂದರ ಕಾಲ. ಅದರಂತೆ ನಾಗಿಯ ದೇಹಕ್ಕೆ ಚೆಲುವು ಹೆಜ್ಜೆ ಇಡುತ್ತದೆ. ಗೇರು ಹೂವಿನಂತೆ ಪ್ರೀತಿ ಅವಳ ಮನಸ್ಸಿಗೆ ಲಗ್ಗೆ ಇಡುತ್ತದೆ. ನಾಗಿಯು ಹಸಿರು ಸೀರೆ ಉಟ್ಟು, ಇಂದ್ರಧನುವಿನಂತೆ ಹೊಳೆಯುವ ರವಿಕೆ ತೊಟ್ಟು ಜಾತ್ರೆಗೆ ಹೋಗುತ್ತಾಳೆ. ಅವಳು ತೊಡುವ ಬಣ್ಣಬಣ್ಣದ ಬಟ್ಟೆಗಳು ಅವಳ ಮನಸ್ಸನ್ನು ಸಂಕೇತಿಸುತ್ತವೆ. ಹೋಗುವ ಹಾದಿಯಲ್ಲಿ ಕೊಕ್ಕಿನಲ್ಲಿ ಕೊಕ್ಕನಿರಿಸಿ ಪ್ರೀತಿಯಿಂದ ಆಡುತ್ತಿದ್ದ ಹಕ್ಕಿಗಳನ್ನು ನೋಡುತ್ತಾಳೆ. ದಾರಿಯಲ್ಲಿ ಚಂದದ ಬೆಕ್ಕೊಂದನ್ನು ಕಂಡು, ಅದರ ಕೂಗನ್ನು ಕೇಳಿ ಮರುಗಿ ಅದನ್ನು ಹಿಡಿದು ಮುದ್ದಿಸುತ್ತಾ ಸಾಗುತ್ತಾಳೆ.

ನಾಗಿಯು ಜಾತ್ರೆಯಲ್ಲಿ ಸೀರೆಯವನನ್ನು ನೋಡುತ್ತಾಳೆ. ಆತ ಚಿಗುರು ಮೀಸೆಯ, ಎಳೆನಗೆಯ ರೂಪವಂತನಾಗಿದ್ದ. ಆತ ಎದೆಯ ಕದವ ತೆರೆದು ಕಣ್ಣಿನಲ್ಲೇ ಮಾತನಾಡಿದಾಗ ಅವರ ನಡುವೆ ಪ್ರೀತಿ ಹುಟ್ಟಿಕೊಳ್ಳುತ್ತದೆ. ಅಂದಿನಿಂದ ನಾಗಿಯ ವರ್ತನೆ ಬದಲಾಗುತ್ತದೆ. ಆಕೆ ಹೆಚ್ಚು ಕಾಲವನ್ನು ಬೆಕ್ಕಿನೊಂದಿಗೇ ಕಳೆಯುತ್ತಾಳೆ. ಕೊನೆಗೊಮ್ಮೆ ತನ್ನ ಪ್ರೀತಿಯನ್ನು ಹುಡುಕಿಕೊಂಡು ಹೊರಟುಹೋಗುತ್ತಾಳೆ.

ನಾಗಿಯ ಕಥೆಯಲ್ಲಿ ಪರಂಪರಾಗತ ನಿಯಮಗಳನ್ನು ದಾಟಿ ನಿಲ್ಲುವನಾಗಿ ಪ್ರಕೃತಿಪರ ಪ್ರೀತಿಯಲ್ಲಿ ತನ್ನ ಹಾದಿಯನ್ನು ಕಂಡುಕೊಳ್ಳುತ್ತಾಳೆ. ಬೆಕ್ಕು, ಹಾದಿ, ದಾರಿ ಇವುಗಳನ್ನು ಕವಿ ಸಾರ್ಥಕ ಸಂಕೇತಗಳಾಗಿ ಬಳಸುತ್ತಾನೆ. ನೀಲಿ ಹಸಿರು ಜರಿ ಸೀರೆಗಳ ಆಕರ್ಷಣೆಗೆ ಒಳಗಾಗಿದ್ದ ನಾಗಿ ಬಣ್ಣ ಬದುಕಿಗೆ ತನ್ನನ್ನ ತೆರೆದುಕೊಳ್ಳುತ್ತಾಳೆ. ಸೂಕ್ತವಾದ ನೆಲೆಗಳಲ್ಲಿ ಪ್ರೀತಿ ಹುಟ್ಟಿ ಯಾರಿಗೂ ಸುಳಿವು ಕೊಡದೆ ತನ್ನ ಸುಳಿಯಲ್ಲಿ ಸಿಲುಕಿಸಿಕೊಳ್ಳುತ್ತಾಳೆ. ಈ ಮೂಲಕ ಕವಿಯು ನಾಗಿಯ ಪಾತ್ರದ ಮೂಲಕ ಯೌವ್ವನದ ಮನಸ್ಥಿತಿ ತಿಳಿಸಿದ್ದಾರೆ.

41. ಕವಿ ಸು.ರಂ.ಎಕ್ಕುಂಡಿಯವರು 'ನಾಗಿಯ ಕಥೆ' ಎಂಬ ಕವಿತೆಯು ನಾಗಿಯ ದುರಂತಕಥೆ ಎಂದು ಹೇಳಲು ಯಾವುದೇ ಸ್ಪಷ್ಟ ಆಧಾರಗಳಿಲ್ಲ. ಆದರೆ ಕವನದ ಕೆಲವು ಸಾಲುಗಳು ನಾಗಿಯ ದುರಂತವನ್ನು ಸೂಚಿಸುತ್ತವೆ.

ಸಾಲುಮರದ ನೆರಳಿನಲ್ಲಿ ಹಾವಿನಂಥ ಹಾದಿಗೆ
ಕೈಯೊಳೊಂದು ದೀಪ ಹಿಡಿದು ಸಾಗುತಿರಲು ನಾಗಿಗೆ

ನಾಗಿ ಮತ್ತು ಅವಳ ತಾಯಿ ತೇರನ್ನು ಎಳೆಯುವ ಸಂಭ್ರಮಕ್ಕೆ ಹೋಗಾದ ನಾಗಿಯು ಅಲ್ಲಿ ಸೀರೆ ಮಾರುವವನನ್ನು ನೋಡಿದಾಗ ಅವರಲ್ಲಿ ಪ್ರೀತಿ ಹುಟ್ಟಿಕೊಳ್ಳುತ್ತದೆ. ಆಗ ಕವಿಯು,

..ಪ್ರೀತಿ ಹೊತ್ತಿಸಿಟ್ಟ ದೀಪ, ದಾರಿಯಲ್ಲಿ ಕತ್ತಲು
ದೀಪ ನಿಲ್ಲಬಹುದೆ ಇಲ್ಲಿ ಗಾಳಿ ಬಂದು ಮುತ್ತಲು?

ಎಂದಿದ್ದಾರೆ. ಕವಿಯ ಈ ಮಾತುಗಳು ನಾಗಿಯ ಪ್ರೀತಿ ಉಳಿಯುವುದಿಲ್ಲ ಎಂಬ ಸೂಚನೆಯನ್ನು ಕೊಡುತ್ತವೆ. ಆದರೆ ಪ್ರೀತಿ ಒಂದು ನಾಗಸ್ವರವಾದ್ದರಿಂದ ಅದರ ಕರೆಯನ್ನಾಲಿಸಿ, ತನ್ನ ಪ್ರೀತಿಯನ್ನು ಅರಸಿ ನಾಗಿ ಮನೆಯನ್ನು ತೊರೆದು ಹೊರಡುತ್ತಾಳೆ. ಆಗ ಕವಿಯು,

ತೆರೆದ ಹಾಲು ಮಡಕೆ ನೋಡಿ, ಬಿಳಿಯ ಬೆಕ್ಕು ಹಾರಿತು.
ಕತ್ತಲಲ್ಲಿ ಎಡಹುವಂತೆ ಹಿಡಿದ ದೀಪವಾರಿತು.

ಎನ್ನುತ್ತಾರೆ. ಈ ಮಾತುಗಳು ನಾಗಿಗೆ ದುರಂತ ಒದಗಿಬಂದಿದೆ ಎನ್ನುವುದನ್ನು ಸೂಚಿಸುತ್ತವೆ. ನಾಗಿಯ ಹೆತ್ತವರು ಅವಳನ್ನು ಹುಡುಕಿ ಹುಡುಕಿ ಅಲೆಯುತ್ತಾರೆ. ಈ ಸಂದರ್ಭದಲ್ಲಿ ಕವಿಯು,

ಪ್ರೀತಿ ಹೆಜ್ಜೆ ಇಡುವ ಹಾದಿ, ಹಿಂದೆ ಬರದ ಹಾದಿಯು
ಇಲ್ಲೆ ಅಲ್ಲವೇನು ಹೆಣ್ಣಿಗಿರುವ ಭಯ ಅನಾದಿಯು

ಎಂದು ಕವನವನ್ನು ಅಂತ್ಯಗೊಳಿಸುತ್ತಾರೆ. ಹೆಣ್ಣಿಗಿರುವ ಭಯದ ಕುರಿತು ಹೇಳಿ ಕವಿ ಕವನವನ್ನು ಅಂತ್ಯಗೊಳಿಸುವುದರಿಂದ ನಾಗಿಯ ಪ್ರೀತಿಯು ದುರಂತವನ್ನು ಕಾಣುತ್ತದೆ ಎಂದು ನಾವು ಭಾವಿಸಬಹುದು.

**ಈ ವಿಭಾಗ**

**IX ಎರಡು ಮೂರು ವಾಕ್ಯಗಳ ಉತ್ತರ. 2x2=4**

42. ರೈತನ ಗೆಳೆಯರು ಕೆರೆಗಳು ಮತ್ತು ತೊರೆಗಳು.
43. ಗುಡಿಗಳು ಪಾಪಿಗಳ ಮತ್ತು ಭೋಗಿಗಳ ಗೂಡುಗಳು ಎಂದು ತಿರುಕ ಹೇಳುತ್ತಾನೆ.
44. ಚಂದ್ರ, ಗಂಗೆ, ಹಣೆಗಣ್ಣು, ಹಾವು, ಜನಿವಾರ, ಬೂದಿಗಳಿಲ್ಲದೆ ಶಿವನನ್ನು ಶಿವಗುಡಿಗೆ ಸೇರಿಸುವುದಿಲ್ಲ.
45. ಜಲಗಾರನು ಊರ ತೋಟಿಯಾದರೆ, ಶಿವನು ಜಗದ ತೋಟಿಯಾಗಿದ್ದಾನೆ.

**X ಸಂದರ್ಭ– ಸ್ವಾರಸ್ಯ 2x3=6**

46. ಈ ವಾಕ್ಯವನ್ನು ಕುವೆಂಪುರವರ 'ಜಲಗಾರ' ಎಂಬ ನಾಟಕದಿಂದ ಆಯ್ದುಕೊಳ್ಳಲಾಗಿದೆ.
ರೈತನು ಜಲಗಾರನನ್ನು ಉದ್ದೇಶಿಸಿ ಈ ಮೇಲಿನ ಮಾತನ್ನು ಆಡುವನು.

ರೈತನು ಮುಂಜಾನೆಯಲ್ಲಿ ಹೋಗುತ್ತಿರುವುದು ಎಲ್ಲಿಗೆಂದು ಜಲಗಾರ ಪ್ರಶ್ನಿಸುತ್ತಾನೆ. ಆಗ ರೈತನು ಆ ದಿನ ನಮ್ಮೂರಿನ ಶಿವ ಗುಡಿಯ ಜಾತ್ರೆ ಇದೆ ನೀನು ಬರುವುದಿಲ್ಲವೇ ಎಂದು ಜಲಗಾರನನ್ನು ಕೇಳುತ್ತಾನೆ. ಅದಕ್ಕೆ ಜಲಗಾರ ಶಿವಗುಡಿಯ ಜಾತ್ರೆ ತನಗೇಕೆ ಅಲ್ಲಿ ಜೋಯಿಸರು ದೇಗುಲದ ಬಳಿಗೆ ತನ್ನನ್ನು ಸೇರಿಸುವುದಿಲ್ಲ ಎನ್ನುತ್ತಾನೆ. ಆಗ ರೈತನು ಜಲಗಾರನ ಬಳಿ ಈ ಮಾತುಗಳನ್ನು ಆಡುತ್ತಾನೆ.

ರೈತ ಸಹ ಜೋಯಿಸನ ಜಾತಿಪದ್ಧತಿಯನ್ನು ಒಪ್ಪಿಕೊಂಡಿರುವ ಸಂಗತಿ ಇಲ್ಲಿ ಮನವರಿಕೆ ಆಗುತ್ತದೆ.

47. ಈ ವಾಕ್ಯವನ್ನು ಕುವೆಂಪುರವರ 'ಜಲಗಾರ' ಎಂಬ ನಾಟಕದಿಂದ ಆಯ್ದುಕೊಳ್ಳಲಾಗಿದೆ.
ಈ ಮಾತನ್ನು ಜಲಗಾರ ತಿರುಕನನ್ನು ಉದ್ದೇಶಿಸಿ ಹೇಳಿದ್ದಾನೆ.

ತರುಣರ ದೌರ್ಜನ್ಯಕ್ಕೆ ಒಳಗಾದ ತಿರುಕನನ್ನು ಸಂತೈಸಿದ ಜಲಗಾರನು ಮರುಕದಿಂದ ಆತನಿಗೆ ಏನು ಬೇಕಾಗಿದೆ ಎಂದು ವಿಚಾರಿಸಿಕೊಳ್ಳುತ್ತಾನೆ. ಆಗ ತಿರುಕನು ತಾನು ಹೊಟ್ಟೆಗಿಲ್ಲದೆ ಸಾಯುತ್ತಿರುವುದರಿಂದ ತುತ್ತು ಅನ್ನ ಬೇಕಾಗಿದೆ ಎನ್ನುತ್ತಾನೆ. ಆಗ ಜಲಗಾರನು ಅವನನ್ನು ಸಂತೈಸುತ್ತ ಬಡವರಿಗೆ ಬಡವರಲ್ಲದೆ ಬೇರೆ ಗತಿ ಇಲ್ಲವೆಂದು ಹೇಳಿ ತಾನು ಅವನ ನೆರವಿಗೆ ಬರುತ್ತಾನೆ.

ಜಲಗಾರನ ಕರುಣೆ, ಮಮತೆ, ಸಹಾನುಭೂತಿ ಇಲ್ಲಿ ಅನಾವರಣಗೊಂಡಿದೆ.

48. ಈ ವಾಕ್ಯವನ್ನು ಕುವೆಂಪುರವರ 'ಜಲಗಾರ' ಎಂಬ ನಾಟಕದಿಂದ ಆಯ್ದುಕೊಳ್ಳಲಾಗಿದೆ.
ವೇಷಧಾರಿ ಶಿವನು ಜಲಗಾರನನ್ನು ಉದ್ದೇಶಿಸಿ ಈ ಮಾತನ್ನು ಹೇಳಿದ್ದಾನೆ.

ಜಲಗಾರನು ಶಿವನನ್ನು ಕುರಿತು ಮೈದೋರುವಂತೆ ಪ್ರಾರ್ಥಿಸುತ್ತಾನೆ. ಆಗ ಹಠತ್ತಾಗಿ ಶಿವನು ಜಲಗಾರನ ವೇಷದಲ್ಲಿ ಪ್ರತ್ಯಕ್ಷನಾಗುತ್ತಾನೆ. ಆಗ ಜಲಗಾರ ಭಯದಿಂದ ಯಾರೆಂದು ಪ್ರಶ್ನಿಸಿದಾಗ ಶಿವನು ಸಹೋದರನೇ ಅಂಜದಿರು ನಾನು ನೀನು ಬಂಧು ಎಂದು ಹೇಳುತ್ತಾನೆ.

ದೇವರು ಬಡವರ ಬಂಧು ಎಂಬ ಅಭಿಪ್ರಾಯ ಇಲ್ಲಿದೆ. ಆದರೆ ಬಡವರು ಬಡವರಾಗಿಯೇ ಉಳಿಯುವುದು ಕಂಡಾಗ ಈ ಮಾತು ಸುಳ್ಳೆನ್ನಿಸುತ್ತದೆ.

**XI ವಿವರವಾದ ಉತ್ತರ. 2x4=8**

49. ಭೂ ದೇವಿ ಉಷ:ಕಾಲವನ್ನು ತನ್ನ ಗೆಳತಿಯೆಂದು ಭಾವಿಸಿದ್ದಾಳೆ. ಭೂದೇವಿಯು ಉಷೆಯನ್ನು ಕೆಂಪಿನ ಮುತ್ತಿನ ಮಾಲೆಯನ್ನು ತೆಗೆದುಕೊಂಡು, ಮಬ್ಬಿನ ಮಂಜಿನ ಮುಸುಕನ್ನು ಎತ್ತಿ, ಉದಯಾಚಲವನ್ನು ಹತ್ತಿ, ಹಸಿರಿನ ಬನಗಳನ್ನು ಮುದ್ದಿಸಿ, ಗಿರಿಶೃಂಗಗಳನ್ನು ಆಲಂಗಿಸಿ, ಮಲಗಿರುವ ಹಕ್ಕಿಗಳನ್ನು ಕರೆಯುತ್ತಾ, ಮಂದಾನಿಲನನ್ನು ಎಬ್ಬಿಸಿ, ಉದಯಾನಂದದ ಕಲಶವನ್ನು ಹೊತ್ತು ಬರಬೇಕೆಂದು ಕೋರುತ್ತಾಳೆ.

ಉಷೆಯು ಮಂಜಿನ ಜಪಮಣಿ ಮಾಲೆಯನ್ನು ಹಿಡಿದು, ಕಾಡಿನಲ್ಲಿ ಅರಳಿರುವ ಹೂಗಳನ್ನು ಮುಡಿದು, ಹೂವಿನ ಕೆಂಪಿನ ಕುಂಕುಮವಿಟ್ಟು, ತಳಿರಿನ ಸೊಬಗಿನ ಸೀರೆಯನ್ನುಟ್ಟು, ಪೈರಿನ ರಮಣೀಯತೆಯನ್ನು ತೊಟ್ಟು, ಮುಗಿಲಿನ ಕುರುಳನ್ನು ತೇಲಲು ಬಿಟ್ಟು, ಉದಯದ ಹೂಗಳ ಸೊಬಗನು ಕೊಯ್ದು, ವನಗಳ ನಗ್ನ ಗಂಭೀರತೆಯನ್ನು ಆಯ್ದು, ವಿಶ್ವದ ಗರ್ಭದ ಚೆಲುವನು ಹೊಯ್ದು, ಮಾಯಾ ಮೋಹದ ಜಾಲವನ್ನು ನೇಯ್ದು, ತಳಿರಿನ ಹೂಗಳ ಸೇತುವೆಯನ್ನು ಮಾಡಿ ನಲಿನಲಿದಾಡುತ್ತಾ ಆಗಮಿಸಬೇಕೆಂದು ಭೂದೇವಿಯು ಹಾಡುತ್ತಾಳೆ.

50. ಜಲಗಾರನು ತನ್ನ ಶಿವ ಹಾಗೂ ತನ್ನ ಪೂಜೆಯನ್ನು ಕುರಿತು ಹೇಳುವ ಮಾತುಗಳು ಸ್ವಾರಸ್ಯಕರವಾಗಿವೆ, ಆತನ ಶಿವ ಮಣ್ಣಿನಲ್ಲಿರುವನು. ಆತನ ಶಿವನು ಕೊಳೆತ ಕಸದೊಳಗಿರುವನು. ಆತನ ಶಿವ ಕರ್ಪೂರ, ಮಂಗಳಾರತಿ, ಹೂವುಗಳಲ್ಲಿ ಇಲ್ಲ. ಅವನ ಪ್ರಕಾರ ಶಿವನು ಗುಡಿಯೊಳಗಿಲ್ಲ ಬದಲಿಗೆ ಜಲಗಾರನ ಎದೆಯೇ ಶಿವನ ಗುಡಿಯಾಗಿದೆ. ಎಲ್ಲಿ ಜಲಗಾರನಿರುವನೋ ಅಲ್ಲಿ ಶಿವನಿದ್ದಾನೆ. ಅವನ ಒಲುಮೆಯೇ ಶಿವಪೂಜೆಯಾಗಿದೆ. ಎಲ್ಲಿ ತಾನು ಭಕ್ತಿಯಿಂದ ಕೈಮುಗಿಯುವನೋ ಅಲ್ಲೇ ಶಿವನಿದ್ದಾನೆಂದು ಜಲಗಾರ ವಿವರಿಸುತ್ತಾನೆ. ತಾನು ಮಾಡುವ ಒಳ್ಳೆಯ ಕೆಲಸಗಳಲ್ಲಿ ಶಿವ ಮೈದೋರುತ್ತಾನೆ ಎಂದು ಜಲಗಾರ ಹೇಳುತ್ತಾನೆ. ಆತನ ಕರ್ಮವೇ ಆರಾಧನೆಯಾಗಿದೆ. ಸೇವೆಯೇ ಶಿವಪೂಜೆಯಾಗಿದೆ. ಜಲಗಾರನ ಪೊರಕೆಯೇ ಆತನ ಪಾಲಿನ ಆರತಿ, ಗುಡಿಸುವುದೇ ಜಲಗಾರನ ಪೂಜೆಯಾಗಿದೆ.

51. ಕುವೆಂಪುರವರ ಜಲಗಾರ ನಾಟಕವು ಪ್ರಕಾರ ವೈಚಾರಿಕತೆಯಿಂದ ಕೂಡಿದ ಕೃತಿಯಾಗಿದೆ. ಸಮಾಜದ ಜನರಲ್ಲಿ ಜಾತಿ–ಕುಲಗಳಲ್ಲಿ ತಾರತಮ್ಯ, ಶ್ರೀಮಂತ ಬಡವರ ನಡುವಿನ ಅಸಮಾನತೆ, ಪೂಜೆ, ದೇವರುಗಳ ವಿಚಾರದಲ್ಲಿ ಹೇರಿರುವ ಮೌಢ್ಯ ಮತ್ತು ಅಂಧ ಶ್ರದ್ಧೆಯನ್ನು ಜಲಗಾರ ನಾಟಕವು ಬೆರಳು ಮಾಡಿ ತೋರಿಸಿದೆ. ಜಲಗಾರನ ಮೂಲಕ ಮಾಡುವ ಕೆಲಸದಲ್ಲಿ ದೇವರನ್ನು ಕಾಣಬೇಕೆಂಬ ವಿಚಾರವನ್ನು ನಾಟಕಕಾರರು ತೋರಿದ್ದಾರೆ. ಶಿವನನ್ನು ಶಾಸ್ತ್ರಿಗಳು ಕಾಣುವ ರೀತಿಗೂ, ಜಲಗಾರ ಭಾವಿಸುವ ರೀತಿಗೂ ಇರುವ ಅಂತರ ಬಹುಮುಖ್ಯವಾದುದು ಎಲ್ಲರೂ ಶಿವನನ್ನು ಗುಡಿಯಲ್ಲಿ ಅರಸಿದರೆ, ಜಲಗಾರ ಮಾತ್ರ ಶಿವನನ್ನು ಧೂಳಿನಲ್ಲಿ ಕಾಣುತ್ತಾನೆ. ಬ್ರಾಹ್ಮಣರು, ರೈತರು, ತರುಣರಲ್ಲಿ ರೂಢಿಗತವಾದ

ಅಂಥ ಶ್ರದ್ಧೆ ಕಂಡುಬಂದರೆ, ಅವಿದ್ಯಾವಂತರು ಬಡವನು ಆದ ಜಲಗಾರನಲ್ಲಿ ವೈಚಾರಿಕ ಪ್ರಜ್ಞೆ ಇರುವುದನ್ನು ಅರಿಯಬಹುದು. ತಿರುಕನ ಮೂಲಕ ನಾಟಕಗಾರರು ದೇವಾಲಯವೆಂದರೆ ಪಾಪಿಗಳು – ಭೋಗಿಗಳ ಗೂಡು ಎಂದು ಹೇಳಿಸುವ ಧೈರ್ಯ ಮಾಡಿದ್ದಾರೆ.

## ಉ ವಿಭಾಗ

**XII ಟಿಪ್ಪಣಿ** **2x2=4**

52. ಚಂಪೂ ಸಾಹಿತ್ಯ– ಗದ್ಯ–ಪದ್ಯ ಮಿಶ್ರಿತವಾದ ಶೈಲಿಯ ಹಳೆಗನ್ನಡ ಸಾಹಿತ್ಯವನ್ನು ಚಂಪೂ ಸಾಹಿತ್ಯ ಎಂದು ಕರೆಯುತ್ತರೆ. ಚಂಪೂ ಎಂಬ ಪದಕ್ಕೆ ಸುಂದರವಾದ, ಮನೋಹರವಾದ ಎಂಬ ಅರ್ಥಗಳಿವೆ. ಕನ್ನಡದಲ್ಲಿ ಚಂಪೂ ಸಾಹಿತ್ಯವನ್ನು ವಸ್ತುಕ, ಓದುಗಬ್ಬ, ಮಾರ್ಗ ಕವಿತ್ವ ಎಂದು ಕರೆದಿದ್ದಾರೆ. ಪಂಪನ 'ಆದಿಪುರಾಣ' ಕನ್ನಡದ ಮೊದಲ ಉಪಲಬ್ಧ ಚಂಪೂಕೃತಿಯಾಗಿದೆ.
53. ಹರಿಹರ– ಈತ ಹದಿಮೂರನೇ ಶತಮಾನದ ಕ್ರಾಂತಿಕಾರಿ ಕವಿ. ಈತನನ್ನು 'ರಗಳೆಯ ಕವಿ' ಎಂದೂ ಕರೆಯುತ್ತಾರೆ. ಹಂಪೆಯ ವಿರೂಪಾಕ್ಷನ ಪರಮಭಕ್ತನಾದ ಈತನ ಸಾಹಿತ್ಯವು ಭಕ್ತಿ ಪ್ರಧಾನವಾದುದು. ನೂರಾರು ರಗಳೆಗಳನ್ನು ರಚಿಸಿ ಈತ ಕನ್ನಡ ಸಾಹಿತ್ಯವನ್ನು ಸಿರಿವಂತಗೊಳಿಸಿದ್ದಾನೆ.
54. ತ್ರಿಪದಿ– ತ್ರಿಪದಿ ಒಂದು ದೇಸೀ ಛಂದೋಪ್ರಕಾರ. ಇದನ್ನು ಕನ್ನಡ ಛಂದೋಗಂಗೆಯ ಗಾಯತ್ರಿ, ಕನ್ನಡ ವೃತ್ತಗಳ ಗಾಯಿತ್ರಿ ಎಂದು ಕರೆಯುತ್ತಾರೆ. ಮೂರು ಶಲಿನ ತ್ರಿಪದಿಗಳು ಮೂಲತಃ ಅಂಶಗಣಗಳಿಂದ ಕೂಡಿದ್ದು ನಂತರ ಮಾತ್ರಾಗಣವಾಗಿ ಬದಲಾಗಿದೆ.
55. ಸಂಚಿಯ ಹೊನ್ನಮ್ಮ– ಈಕೆಯ ಕಾಲ ಹದಿನೇಳನೇ ಶತಮಾನ. ಈಕೆ ಚಿಕ್ಕದೇವರಾಯನ ಆಸ್ಥಾನದ ಸಾಮಾನ್ಯ ಊಳಿಗದವಳು. ಈಕೆ ಮೂಲತಃ ಚಾಮರಾಜನಗರ ಜಿಲ್ಲೆಯ ಯಳಂದೂರಿನವಳು. ಈಕೆಯ 'ಹದಿಬದೆಯ ಧರ್ಮ' ಕೃತಿಯು ಅತ್ಯಂತ ಜನಪ್ರಿಯವಾದ ಕೃತಿಯಾಗಿದೆ.

**XIII ಸೂಚನೆಗೆ ಅನುಗುಣವಾದ ಉತ್ತರ.** **6x2=12**

56. ಮಂದಾನಿಲ–ತಂಗಾಳಿ,
    ಪಾರ್ವ–ಬ್ರಾಹ್ಮಣ
    ವಸನ–ವಸ್ತ್ರ
57. ವಾರ್ಧಿ– ಜಲಧಿ, ಅಂಬುಧಿ
    ಸೂರ್ಯ–ರವಿ, ಭಾಸ್ಕರ
    ಕಾಯಕ–ದುಡಿಮೆ, ಕರ್ಮ
58. ಜವ– ಯಮ, ವೇಗ
    ಬಗೆ–ಮನಸ್ಸು, ಆಲೋಚನೆ
    ಕಾಡು–ಪೀಡಿಸು, ಅರಣ್ಯ
59. ರಕ್ಕಸ–ರಾಕ್ಷಸ
    ಜವ್ವನ–ಯೌವನ
    ವನ–ಬನ
60. ಎದ್ದೆದ್ದು–ಎದ್ದು+ಎದ್ದು
    ಅರುಣೋದಯ–ಅರುಣ+ಉದಯ
    ಬಯಲಿನಂಚಿಗೆ–ಬಯಲಿನ+ಅಂಚಿಗೆ

61. ಸುರXಅಸುರ

ಹಿಗ್ಗುXಕುಗ್ಗು

ನೀತಿXಅನೀತಿ

62. **ತಲೆಗೇರು–** ಹಣದ ಮದ ತಲೆಗೇರಿದ ಸಿರಿವಂತರಿಂದ ದೇಶಕ್ಕೆ ಹಾನಿಯಾಗುತ್ತದೆ.

**ನೂಕುನುಗ್ಗಲು–** ಜಾತ್ರೆಯಲ್ಲಿ ಜನರ ನೂಕುನುಗ್ಗಲಿನಲ್ಲಿ ಪುಟ್ಟ ಮಕ್ಕಳನ್ನು ಜೋಪಾನವಾಗಿ ನೋಡಿಕೊಳ್ಳಬೇಕು.

**ಕಂಗೊಳಿಸು–**ಮಲೆನಾಡಿನಲ್ಲಿ ಮಳೆಗಾಲದಲ್ಲಿ ಜಲಪಾತಗಳು ಮೈತುಂಬಿಕೊಂಡು ಕಂಗೊಳಿಸುತ್ತಿರುತ್ತವೆ.

63. ಓಡೋಡಿ, ತುತ್ತತುದಿ.

## ಊ ವಿಭಾಗ

**XIV ಪ್ರಸ್ತಾರ–ಗಣವಿಂಗಡಣೆ–ಛಂದಸ್ಸಿನ ಹೆಸರು** **1x4=4**

64.
_UU | _UU | _ _
ಅಂಬರ | ಭೂಷಣ | ಮಾಲಾ

_ U U | U U _ | UUUU | _ U U | UU _
ಡಂಬರ | ದ ಬೆಡಂ | ಗನಮರ | ನರ್ತಕಿ | ಗಡಮೇ

_ U U | UU_ | _ UU
ನೆಂಬುದೊ | ಧರಣೀಂ | ದ್ರಂಗಮ

_ _ | U U _ | U _ U | _ _ | UU _
ಳುಂಬಂ | ಪೊಗಳ | ಲ್ಕೆ ರೂಪು | ನೀಳಾಂ | ಜನೆಯಾ

**–ಕಂದಪದ್ಯ**

65.
_ U U | U U U U | _ _ | UUUU
ಗುಂಡನ | ಹೃದಯವಿ | ದೆಂದೇ | ಬಗೆವುತೆ

_U U | UU _ | U U _ | UUUU
ತಂಡದ | ಸುರರೋ | ಲಗಮಂ | ಮರೆವುತೆ

**-ರಗಳೆ**

66.
UUU | _U U | _ U | U UU U
ಕಡಲ | ನೀರುಗ | ಳೆಲ್ಲ | ವಮೃತದ

U U U | _ U U | U UU | UUUU
ಮಡುಗ | ಳಾದಡೆ | ಯಹವು | ಸುರಗಿರಿ

U UU | UU _ | UUU | _UU | UUU | _ U U | _
ಕುಡಿವಿ | ಡಿದು ಹ | ಬ್ಬಿದಡೆ | ಹಬ್ಬುವು | ದವನಿ | ಮಂಡಲ | ದ

UUU | _UU | _U | UU_
ಗಿಡಗ | ಳೆಲ್ಲವು | ಕಲ್ಪ | ತರುವಾ

| UUU | U U _ | _ U | _ U U | | | |
|---|---|---|---|---|---|---|
| ದಡೆಯ | ಹವುಯೆ | ತ್ತಾನು | ಕಾಲಕೆ | | | |
| U U U | _ U U | UUU | _ _ | _U | _ _ _ | |
| ಮಡದಿ | ಮಾಯೆಗೆ | ಪರಮ | ತತ್ವ | ಜ್ಞಾನ | ವಿಲ್ಲೆಂದ | |

**–ಭಾಮಿನಿ ಷಟ್ಪದಿ**

**XV ಒಂದರ ಅಲಂಕಾರ ಹೆಸರಿಸಿ ಸಮನ್ವಯಗೊಳಿಸಿ.** **1x4=4**

67. ಅಲಂಕಾರ– ಉಪಮಾಲಂಕಾರ
ಉಪಮೇಯ– ನಾಗಿಯ ರವಿಕೆ
ಉಪಮಾನ– ಇಂದ್ರಧನು
ಸಮಾನಧರ್ಮ–ಹೊಳೆಯುವುದು
ಉಪಮವಾಚಕ–ಅಂತೆ

68. ಯಮಕಾಲಂಕಾರ
‘ಮೃದುನುಡಿ’ ಪದವು ಪದ್ಯದ ಆದಿಯಲ್ಲಿ ನಿಯತವಾಗಿ ಬಂದಿರುವುದರಿಂದ ಇದು ಯಮಕಾಲಂಕಾರವಾಗಿದೆ.

69. ಉತ್ಪ್ರೇಕ್ಷಾಲಂಕಾರ
ಸೂರ್ಯನು ದಿನನಿತ್ಯವೂ ಉದಯಿಸುತ್ತಾನೆ. ಆದರೆ ಯುದ್ಧವನ್ನು ನೋಡಲೆಂದೇ ದಿನಪನುದಿಸಿ ಬಂದ ಎನ್ನುವುದು ಉತ್ಪ್ರೇಕ್ಷೆಯಾಗಿದೆ.

**XVI ಅನುವಾದ** **1x4=4**

70. ಎಂದು ಹಲವು ಬಗೆಯಿಂದ ಹಲುಬಿ, ವಿರೂಪಾಕ್ಷನ ಉಪೇಕ್ಷೆಯಿಂದ ಈ ಪರಾಜಯ ಉಂಟಾಗಿದೆಯೆಂದು ತನ್ನ ಅಂತರಂಗದಲ್ಲಿ ಆಲೋಚಿಸಿಕೊಂಡು, ಕರುಣಾಸಾಗರನಾದ ಶಂಕರನನ್ನು ಸೇವಾಮನೋಭಾವದಿಂದ ಶರಣಾಗಿ ಆತನ ಕಾರುಣ್ಯವನ್ನು ಪಡೆದು ಶತ್ರುವನ್ನು ಸೋಲಿಸುವೆನೆಂದು ಅರ್ಜುನನು ತನ್ನ ಚಿಂತೆಯ ಕೆಸರನ್ನು ವಿವೇಕ ಜಲದಿಂದ ತೊಳೆದು ನಿರ್ಮಲ ಮನಸ್ಸಿನವನಾಗಿ,

71. ಮರಳಲಿಂಗದ ತಲೆಯ ಮೇಲಿನ ಪುಷ್ಪಗಳು ನಿಲ್ಲದೇ ಆ ಕ್ಷಣದಲ್ಲಿಯೇ ಬೇಡನ ತಲೆಯ ಮೇಲಿರುವುದನ್ನು ಕಂಡು ಕಾರಣವಿದೇನು ಹೊಸತೆಂದು ಅಚ್ಚರಿಯ ಮನಸ್ಸಿನ ಅರ್ಜುನನು ಕೂಡಲೇ ಬಿಡದೆ ಲಿಂಗದ ಶೂನ್ಯ ಶಿರವನ್ನು ಮರಳಿ ವೀಕ್ಷಿಸಿದನು.